**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿಸಿ ನಂ.16/2018**

**ಫಿರ್ಯಾದುದಾರರುಃ** ಡಿ.ಮಂಜುನಾಥ ಬಿನ್ ಸಿ.ದಾಸಪ್ಪ,
ವಯಸ್ಸು ಸುಮಾರು 30 ವರ್ಷ,
ವಾಸಃ ರಂಗನಾಥ ಬಡಾವಣೆ,
ಹುಣಸೂರು ತಾಲ್ಲೂಕು.

**– ವಿರುದ್ಧ –**

**ಆರೋಪಿಃ** ಗಣೇಶ ಬಿನ್ ಲೇಟ್ ತಿಬ್ಬನಾಯಕ,
ವಯಸ್ಸು ಸುಮಾರು 30 ವರ್ಷ,
ವಾಸಃ ಕಟ್ಟೆಮಳಲವಾಡಿ ಗ್ರಾಮ,
ಗಾವಡಗೆರೆ ಹೋಬಳಿ, ಹುಣಸೂರು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿದ್ದೀರಾ ? |
| ಉತ್ತರ: | ಕೇಳಿದ್ದೇನೆ |
| ಪ್ರಶ್ನೆ 2: | ಫ್ರಾಸಾ1–ಡಿ.ಮಂಜುನಾಥ, ರವರು ತಮ್ಮ ಪ್ರಮಾಣ ಪತ್ರ / ಸಾಕ್ಷದಲ್ಲಿ, ಆರೋಪಿಯಾದ ನೀವು ದಿನಾಂಕಃ 28.06.2017ರಂದು ಅವರಿಂದ ರೂ.80,000/– ಹಣವನ್ನು ಸಾಲವಾಗಿ ಪಡೆದು, ದಿನಾಂಕಃ 28.08.2017ರ ದಿನಾಂಕ ಇರಮ ಕಟ್ಟೆಮಳಲವಾಡಿ ಶಾಖೆಯ ಓವರ್ ಸೀಸ್ ಬ್ಯಾಂಕ್ ನ 990886 ಸಂಖ್ಯೆ ಇರುವ ಚೆಕ್ ಅನ್ನು ರೂ.80,000/–ಗಳಿಗೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಣಕ್ಕಾಗಿ ಅವರು ಹುಣಸೂರಿನ ಕಾರ್ಪೊರೇಷನ್ ಬ್ಯಾಂಕ್ ಗೆ ಸಲ್ಲಿಸಿದಾಗ, ಬ್ಯಾಂಕ್ ನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು "Funds Insufficient" ಎಂಬ ಹಿಂಬರಹವನ್ನು ನೀಡಿ, ಚೆಕ್ ನ್ನು ಹಿಂದಿರುಗಿಸಿರುತ್ತಾರೆ ಎಂದು ಫ್ರಾಸಾ.1ರವರು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 3: | ಫ್ರಾಸಾ1ರವರು ತಮ್ಮ ಪ್ರಮಾಣ ಪತ್ರ / ಸಾಕ್ಷದಲ್ಲಿ, ಸದರಿ ವಿಷಯದ ಬಗ್ಗೆ ಅವರು ನಿಮಗೆ ನೋಂದಾಯಿತ ಅಂಚೆಯ ಮೂಲಕ ದಿನಾಂಕಃ 06.09.2017ರಂದು ಕಳುಹಿಸಿದ ನೋಟೀಸು ನಿಮಗೆ ಜಾರಿಯಾಗಿದ್ದು ಆದರೂ ನೀವು ಸಾಲದ ಹಣದ ವ್ಯವಸ್ಥೆಯನ್ನಾಗಲಿ ಮಾಡಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಫ್ರಾಸಾ1ರವರು ತಮ್ಮ ಪ್ರಮಾಣ ಪತ್ರ / ಸಾಕ್ಷದಲ್ಲಿ, ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ, ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ನಿಮ್ಮ ಪರ ಸಾಕ್ಷಿಗಳಿವೆಯೇ? |
| ಉತ್ತರ: | ಇಲ್ಲ |
| ಪ್ರಶ್ನೆ 6: | ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೇ? |
| ಉತ್ತರ: | ಹಣವನ್ನು ಹಿಂದಿರುಗಿಸಿ ಚೆಕ್ಕನ್ನು ಕೇಳಿದಾಗ ಗಲಾಟೆಯಾಗಿರುತ್ತದೆ. ನಂತರ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. |

ಈ ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು., ಹುಣಸೂರು.**